ಕರ್ನಾಟಕ ಸರ್ಕಾರ

(ಆರ್ಥಿಕ ಇಲಾಖೆ)

ಸಂಖ್ಯೆ: ಆಇ 195 ವೆಚ್ಚ-12/11

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ: 30.03.2011

**ಸುತ್ತೋಲೆ**

ವಿಷಯ : ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಲಾದ ಕನಿಷ್ಠ ಸಮಯವನ್ನು ಪಾಲಿಸುವ ಬಗ್ಗೆ.

* * * * *

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ದ ನಿಯಮ 17 ರಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿತ ಸಮಯದ ಬಗ್ಗೆ ಸ್ಪಷ್ಟವಾದ ಸೂಚನೆಯನ್ನು ಈ ಮುಂದಿನಂತೆ ತಿಳಿಸಲಾಗಿದೆ:

'ಟೆಂಡರುಗಳನ್ನು ಸಲ್ಲಿಸಲು ಕನಿಷ್ಟ ಸಮಯ: (1) ಟೆಂಡರುಗಳನ್ನು ಸಲ್ಲಿಸಲು ಸಾಕಷ್ಟು ಸಮಯ ಒದಗಿಸಿರುವುದನ್ನು ಮತ್ತು ಸೂಕ್ತ ಟೆಂಡರು ಬುಲೆಟಿನಲ್ಲಿ ಟೆಂಡರುಗಳನ್ನು ಆಹ್ವಾನಿಸುವ ನೋಟೀಸಿನ ಪ್ರಕಟಣೆಯ ದಿನಾಂಕ ಮತ್ತು ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ನಡುವೆ ಕನಿಷ್ಟ ಸಮಯ ನೀಡಿರುವುದನ್ನು ಟೆಂಡರು ಆಹ್ವಾನಿಸುವ ಪ್ರಾಧಿಕಾರಿಯು ಖಚಿತಪಡಿಸಿಕೊಳ್ಳತಕ್ಕದ್ದು. ಈ ಕನಿಷ್ಟ ಸಮಯವು ಈ ಮುಂದಿನಂತಿರತಕ್ಕದ್ದು:

(ಎ) ಎರಡು ಕೋಟಿ ರೂ.ಗಳ ವರೆಗಿನ ಮೌಲ್ಯದ ಟೆಂಡರುಗಳಿಗೆ ಮೂವತ್ತು ದಿನಗಳು, ಮತ್ತು

(ಬಿ) ಎರಡು ಕೋಟಿ ರೂ.ಗಳಿಗಿಂತ ಹೆಚ್ಚಿನ ಮೌಲ್ಯದ ಟೆಂಡರುಗಳಿಗೆ ಅರವತ್ತು ದಿನಗಳು.

(2) (1) ನೇ ಉಪ ನಿಯಮದ ಮೇರೆಗೆ ಗೊತ್ತುಪಡಿಸಲಾದ ಸಮಯದಲ್ಲಿ ಯಾವುದೇ ಕಡಿತವನ್ನು ಮಾಡಬೇಕಾದರೆ ಟೆಂಡರು ಆಹ್ವಾನಿಸುವ ಪ್ರಾಧಿಕಾರಿಗಿಂತ ಹಿರಿಯ ಪ್ರಾಧಿಕಾರಿಯು, ಲಿಖಿತದಲ್ಲಿ ಕಾರಣಗಳನ್ನು ದಾಖಲ್ಮಾಡಿ ನಿರ್ದಿಷ್ಠವಾಗಿ ಅಧಿಕೃತಗೊಳಿಸಬೇಕು.'

ಈ ಮೇಲಿನ ನಿಯಮಗಳಲ್ಲಿನ ಸೂಚನೆಗಳನ್ನು ಪಾಲಿಸದೆ ಇತ್ತೀಚಿನ ದಿನಗಳಲ್ಲಿ ಕೆಲವು ಇಲಾಖೆಗಳಲ್ಲಿನ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಗಳು ಅಸಹಜ ಎನಿಸುವಷ್ಟು ಮಟ್ಟಿಗೆ ಕನಿಷ್ಠ ಸಮಯವನ್ನು ನಿಗಧಿ ಪಡಿಸುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿದೆ. ಆದ್ದರಿಂದ ತಮ್ಮ ಇಲಾಖೆಗಳಲ್ಲಿನ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಗಳು ಮೇಲೆ ತಿಳಿಸಿದ ನಿಯಮದಲ್ಲಿನ ಸೂಚನೆಗಳನ್ನು ಚಾಚೂತಪ್ಪದೆ ಪಾಲಿಸುವುದನ್ನು ದೃಢಪಡಿಸಿಕೊಳ್ಳಬೇಕೆಂದು ಕೋರಲಾಗಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ ರವರಿಂದ ಅನುಮೋದಿಸಲ್ಪಟ್ಟಿದೆ)

(ಹೆಚ್. ಶೇಖರಪ್ಪ) 30/3/11
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು.